

ಸಂಪಾದಕೀಯ

# ಭೌತಪ್ರಪಂಚವೆಂಬ ಮಾಯಾಜಾಲ

**'ಭೂತ'**ದಿಂದ ಆದುದೇ 'ಭೌತ'. ನೀರು ಗಾಳಿ, ಅಗ್ನಿ, ಪೃಥವಿ, ಆಕಾಶ – ಇವೇ ಐದು ಭೂತಗಳು; ಇವನ್ನೇ 'ಪಂಚ ಭೂತಗಳು' ಎನ್ನುತ್ತೇವೆ. ಈ ಐದು ವಸ್ತುಗಳಿಂದ ಆದ ವಸ್ತುಗಳನ್ನೇ 'ಭೌತ', 'ಭೌತಿಕ' ವಸ್ತುಗಳು ಎನ್ನುತ್ತೇವೆ. ಇದನ್ನು ಅನುಸರಿಸಿಯೇ 'ಭೌತಶಾಸ್ತ್ರ'ವೆಂಬ ವಿಜ್ಞಾನ ಶಾಖೆಯ ಹೆಸರೂ ಬಂದಿದೆ. ಇಲ್ಲಿ ಈಗ ಚಿಂತಿಸಲು ಹೊರಟಿರುವುದು ಈ ಭೌತಿಕ ಪ್ರಪಂಚದ ಬಗೆಗೆ; ಪಂಚಭೂತಗಳಿಂದ ನಿರ್ಮಿತವಾದ, ನಮ್ಮ ಇಂದ್ರಿಯಗಳಿಗೆ ಗೋಚರವಾಗುವ ಜಗತ್ತಿನ ಬಗೆಗೆ. ಸ್ಥೂಲ ಜಗತ್ತು, ವ್ಯಕ್ತ ಜಗತ್ತು, ಬಾಹ್ಯ ಜಗತ್ತು ಎಂದೆಲ್ಲ ಕರೆಯುವುದೂ ಇದೇ ಭೌತಿಕ ಜಗತ್ತಿನ ಬಗೆಗೇ ಆಗಿದೆ. ಆಧುನಿಕ ವಿಜ್ಞಾನವೆಲ್ಲವೂ ಇದನ್ನು ಅವಲಂಬಿಸಿಯೇ ತಮ್ಮೆಲ್ಲ ವಿಚಾರ, ವಿಶ್ಲೇಷಣೆ, ಪ್ರಯೋಗ ಹಾಗೂ ಆವಿಷ್ಕಾರಗಳನ್ನು ಮಾಡುತ್ತವೆ. ಆದರೆ ತಾತ್ತ್ವಿಕರು, ದಾರ್ಶನಿಕರು, ಸಾಧುಸಂತರು ಈ ಭೌತಿಕ ಜಗತ್ತನ್ನು ಕಂಡ ಬಗೆ ಹೇಗೆ? ಆಧ್ಯಾತ್ಮಿಕ ದೃಷ್ಟಿಯಿಂದ ಭೌತಿಕ ಜಗತ್ತಿನ ಸ್ಥಾನ ಯಾವುದು? ಈ ವಿಷಯಗಳನ್ನು ಇಲ್ಲಿ ಗಮನಿಸೋಣ.

## ಪ್ರಪಂಚದ ರಚನೆ

ಭೂಮಿಯ ರಚನೆ ಹೇಗಾಯಿತು, ವಿಶ್ವದ ಸೃಷ್ಟಿ ಹೇಗಾಯಿತು ಎಂದು ವಿಜ್ಞಾನವು ವಿವರಿಸುವುದೆಲ್ಲವೂ ಈಗ ನಮ್ಮ ಮುಂದಿರುವ ಪ್ರಪಂಚವನ್ನು ಆಧರಿಸಿ ಕಲೆ ಹಾಕಿರುವ ವಿವಿಧ ಮಾಹಿತಿಗಳನ್ನು ವಿಶ್ಲೇಷಿಸುವ ಮೂಲಕ. ವಿವಿಧ ಗ್ರಹ, ನಕ್ಷತ್ರ, ಉಪಗ್ರಹಗಳ ಚಲನೆ, ಅಂತರಿಕ್ಷದಲ್ಲಾಗುವ ಹಲವು ಬದಲಾವಣೆಗಳು ವಿಜ್ಞಾನಿಗಳ ಹಾಗೂ ಟೆಲಿಸ್ಕೋಪ್ ಮುಂತಾದ ಯಂತ್ರಗಳ ಗಮನಕ್ಕೆ ಬರುತ್ತವೆ. ಅವು ನೀಡುವ ಸೂಕ್ಷ್ಮ ಮಾಹಿತಿಗಳು, ಅಪಾರ ಸಂಖ್ಯೆಯ ವಿವರಗಳು ತೀಕ್ಷ್ಣಮತಿಯ ವಿಜ್ಞಾನಿಗಳ ಗಮನವನ್ನು ತಪ್ಪಿಸಿ ಹೋಗುವುದಿಲ್ಲ. ಇವೆಲ್ಲವನ್ನೂ ಒಟ್ಟಿಗೆ ಸೇರಿಸಿ, ವಿಶ್ಲೇಷಿಸಿ, ಚಿಂತನ–ಮಂಥನ ನಡೆಸಿ ಎಷ್ಟೋ ಲಕ್ಷ ವರ್ಷಗಳ ಹಿಂದೆ 'ಬಿಗ್ ಬ್ಯಾಂಗ್' ಅಥವಾ ಮಹಾ ಸ್ಫೋಟವೊಂದು ಉಂಟಾಯಿತು; ಅದರಿಂದ ಅನೇಕ ನಕ್ಷತ್ರ, ಗ್ರಹ, ಆಕಾಶಕಾಯಗಳು ಉತ್ಪನ್ನಗೊಂಡವು – ಎಂದು ಹೇಳಲಾಗಿದೆ. ಆದರೆ ಈ ಮಹಾಸ್ಫೋಟಕ್ಕೂ ಮುನ್ನ ಪ್ರಪಂಚವಿರಲಿಲ್ಲವೆ? ಇದ್ದರೆ ಹೇಗಿತ್ತು ? ಈ ಪ್ರಮುಖ ಘಟನೆಯಾದರೂ ಯಾವ ಕಾರಣದಿಂದ ಉಂಟಾಯಿತು?– ಈ ವಿಷಯಗಳ ಬಗ್ಗೆ ವಿಜ್ಞಾನ ಹೆಚ್ಚೇನೂ ಹೇಳುವುದಿಲ್ಲ. ರೇಖಾಗತಿಯಂತೆ ಸಾಗುವ ಕಾಲದ ಕಲ್ಪನೆ ಒಂದು ಮಿತಿಯನ್ನು ದಾಟಿ ಮುಂದಕ್ಕೆ ಸಾಗಲಾರದು. ಹಿಂದಾಗಲಿ, ಮುಂದಾಗಲಿ – ಎಷ್ಟೋ ಲಕ್ಷ, ಕೋಟಿ ವರ್ಷಗಳಾಚೆಗೆ ಏನೂ ತಿಳಿಯಲಾಗದೆ, ಅವ್ಯಕ್ತ ಹಾಗೂ ಅಗೋಚರ ಎನ್ನಿಸಿಕೊಳ್ಳುವುದು.

ಆದರೆ ಭಾರತೀಯ ತತ್ತ್ವ, ದರ್ಶನಗಳು ಕಾಲವನ್ನು ರೇಖಾಗತಿಯಲ್ಲಿ ಕಾಣದೆ, 'ಚಕ್ರಗತಿ'ಯಲ್ಲಿ ಕಾಣುತ್ತವೆ. ವಿಜ್ಞಾನವೇನೋ ಭೌತಿಕ ಚಲನೆಯೇ ಚಕ್ರಗತಿಯಲ್ಲಿ ಸಾಗುತ್ತದೆ ಎಂದು ಹೇಳುತ್ತದೆ.(ಒಂದು ರೇಖೆಯನ್ನು ಉದ್ದಕ್ಕೂ ಎಳೆಯುತ್ತಾ ಹೋದರೆ, ಅದು ನೇರವಾಗಿ ಮುಂದೆ ಸಾಗಿದಂತೆ ಕಂಡರೂ, ಅಂತಿಮವಾಗಿ ಅದು ಸಾಗುವುದು ವೃತ್ತಾಕಾರದಲ್ಲಿ; ಎಲ್ಲಿಂದ ಹೊರಟಿದ್ದೇವೋ ಅಲ್ಲೇ ಬಂದು ಸೇರಬೇಕು–ಇದೇ 'ಚಕ್ರಗತಿ')

ಭಾರತೀಯ ದರ್ಶನಗಳಲ್ಲಿ ಅತ್ಯಂತ ಪ್ರಾಚೀನ ದರ್ಶನವಾದ ಸಾಂಖ್ಯದರ್ಶನವು ಪ್ರಪಂಚದ ರಚನೆಯನ್ನು ಇಪ್ಪತ್ತನಾಲ್ಕು ತತ್ತ್ವ (ಚತುರ್ವಿಂಶತಿ ತತ್ತ್ವ)ಗಳ ಮೂಲಕ ವಿವರಿಸುತ್ತದೆ. ಅದಕ್ಕೂ ಮುನ್ನ ವೇದ–ಉಪನಿಷತ್ತುಗಳಲ್ಲಿಯೇ ಜಗತ್ತಿನ ಸೃಷ್ಟಿ ಹೇಗಾಯಿತೆಂದು ಕೆಲವೆಡೆ ವಿವರಿಸಲಾಗಿತ್ತು.(ಉದಾ: ನಾಸದೀಯ ಸೂಕ್ತ, ಪುರುಷ ಸೂಕ್ತ, ತೈತ್ತಿರೀಯೋಪನಿಷತ್ತು). ಆದರೆ ಇವೆಲ್ಲವೂ ಸ್ಪಷ್ಟವಾದ ತಾತ್ತ್ವಿಕ ರೂಪವನ್ನು ಪಡೆಯುವುದು ಸಾಂಖ್ಯದರ್ಶನದಲ್ಲಿ.

ಸಾಂಖ್ಯರ ಪ್ರಕಾರ ಪ್ರಕೃತಿಯೇ ಎಲ್ಲ ಸೃಷ್ಟಿಗೆ ಕಾರಣ. ಪುರುಷ ಎಂಬುದು ಒಂದು ತತ್ತ್ವ; ಪ್ರಕೃತಿ ಇನ್ನೊಂದು ತತ್ತ್ವ. ಪುರುಷನು ತನ್ನ ನೈಜಸ್ವರೂಪವನ್ನು ಮರೆತಿದ್ದಾನೆ; ಪ್ರಕೃತಿಯೊಂದಿಗೆ ಸೇರಿಕೊಂಡು, ಬೇರೇನೋ ವಸ್ತುಗಳಾಗಿ, ಜೀವಿಗಳಾಗಿ ವ್ಯಕ್ತಿಗಳಾಗಿ ಗುರುತಿಸಿಕೊಂಡು ವ್ಯಕ್ತವಾಗಿದ್ದಾನೆ. ಪ್ರಕೃತಿಯು ಬುದ್ಧಿ, ಅಹಂಕಾರಗಳನ್ನು ಸೃಷ್ಟಿಸಿ, ಬಳಿಕ ಅವುಗಳಿಂದ ಒಂದೆಡೆ ಮನಸ್ಸು, ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳನ್ನೂ, ಇನ್ನೊಂದೆಡೆ ಐದು ತನ್ಮಾತ್ರೆಗಳನ್ನೂ ಸೃಷ್ಟಿಸುತ್ತದೆ. ಆ ಐದು ಸೂಕ್ಷ್ಮ ತನ್ಮಾತ್ರೆಗಳಿಂದ ಸ್ಥೂಲವಾದ, ಇಂದ್ರಿಯಗಳಿಗೆ ಗೋಚರವಾಗುವ ಪಂಚಭೂತಗಳು ಸೃಷ್ಟಿಯಾಗುತ್ತವೆ. ಒಂದೆಡೆ ವ್ಯಕ್ತಿಯ ರಚನೆ, ಇನ್ನೊಂದೆಡೆ ಭೌತಿಕ ಪ್ರಪಂಚದ ರಚನೆ. ಅಜ್ಞಾನವಶನಾದ ವ್ಯಕ್ತಿಯು, ತನ್ನ ಮೂಲಸ್ವರೂಪವು ದೇಹ-ಇಂದ್ರಿಯ-ಮನಸ್ಸು-ಅಹಂಕಾರಗಳಲ್ಲ; ತಾನು ಪ್ರಕೃತಿಗಿಂತ ಭಿನ್ನನಾದ ಪುರುಷ-ಎಂಬ ಸತ್ಯವನ್ನು ಸ್ಪಷ್ಟವಾಗಿ ಅರಿತು, ಅವುಗಳ ಹಿಡಿತದಿಂದ ಮುಕ್ತನಾದಾಗಲೇ ಅವನಿಗೆ ಮುಕ್ತಿ. ಅಲ್ಲಿಯವರೆಗೂ ಅವನು ಪ್ರಕೃತಿಯ ನಾನಾ ಕ್ರಿಯೆಗಳಿಗೆ, ಅನುಭವಗಳಿಗೆ, ಕರ್ಮಬಂಧನಕ್ಕೆ ಒಳಗಾಗಿ ಜನ್ಮಜನ್ಮಾಂತರಗಳಲ್ಲಿ, ಹುಟ್ಟು-ಸಾವುಗಳ ಸರಪಳಿಯಲ್ಲಿ ಸುತ್ತುತ್ತಿರಬೇಕು. ಜ್ಞಾನ ಹಾಗೂ ಯೋಗ ಇವುಗಳೇ ಮುಕ್ತಿಗೆ ಮಾರ್ಗಗಳು. ಇವೇ ಸಂಕ್ಷಿಪ್ತವಾಗಿ ಸಾಂಖ್ಯರ ತತ್ತ್ವ.

### ವೇದಾಂತದ ದೃಷ್ಟಿಕೋನ

ಹೆಚ್ಚು ಕಡಿಮೆ ಸಾಂಖ್ಯರ ಸೃಷ್ಟಿತತ್ತ್ವವನ್ನು ವೇದಾಂತವು ಒಪ್ಪಿಕೊಳ್ಳುತ್ತದೆ. ಪುರುಷನ ಬದಲಾಗಿ, ಆತ್ಮತತ್ತ್ವವೇ ವೇದಾಂತದಲ್ಲಿ ಪ್ರಧಾನವಾದುದು. ಆತ್ಮ ಅಥವಾ ಬ್ರಹ್ಮವು ಎಲ್ಲ ಸೃಷ್ಟಿಗೆ ಮೂಲಕಾರಣ; ಆತ್ಮನಲ್ಲಿಯೇ 'ತಾನು ಬಹುವಾಗುವೆನು' ಎಂಬ ಇಚ್ಛೆ ಮೂಡಿತು. ಈ ಇಚ್ಛೆಯನ್ನೇ ಮೊದಲ ಸೃಷ್ಟಿಯೆಂದೂ, ಸೃಷ್ಟಿಗೆಲ್ಲ ಕಾರಣವಾದ ಓಂಕಾರವೆಂದೂ, ಅದರಿಂದ ಸಮಸ್ತ ಜಗತ್ತಿನ ರಚನೆಯಾಯಿತೆಂದೂ ಹೇಳಲಾಗಿದೆ. ಈ ಓಂಕಾರವನ್ನೇ 'ಈಶ್ವರ' ಎಂಬ ಹೆಸರಿನಿಂದ, ಕೆಲವೊಮ್ಮೆ 'ಹಿರಣ್ಯಗರ್ಭ' ಎಂಬ ಹೆಸರಿನಿಂದ ಕರೆಯಲಾಗಿದೆ. ಮುಂದೆ ಸೂಕ್ಷ್ಮ ಪ್ರಪಂಚವಾಗಿ ಬುದ್ಧಿ, ಮನಸ್ಸು, ಅಹಂಕಾರಗಳು ವ್ಯಕ್ತವಾದವು; ಸ್ಥೂಲಪ್ರಪಂಚವಾಗಿ ಪಂಚತನ್ಮಾತ್ರೆಗಳು ಹಾಗೂ ಅವುಗಳಿಂದ ಪಂಚಭೂತಗಳು ರಚನೆಯಾದವು. ಮಾನವ ದೇಹವು ಸ್ಥೂಲಭೌತ ವಸ್ತುಗಳಿಂದ ನಿರ್ಮಿತವಾದರೂ, ಅಂತಃಕರಣಗಳಾದ (ಅಥವಾ ಸೂಕ್ಷ್ಮ ಅವಯವಗಳಾದ) ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳೊಂದಿಗೆ ಸೇರಿಕೊಂಡು ಅವು ಮಾನವನ ಅಂಗಗಳಾದವು – ಮಾನವನ ಸ್ಥೂಲ ಶರೀರವಾಯಿತು.

ವೇದಾಂತವು ಭೌತಿಕ ಪ್ರಪಂಚವನ್ನು ಅಲ್ಲಗಳೆಯುವುದಿಲ್ಲ; ಆದರೆ ಅದಕ್ಕಿಂತ ಮಾನವನ ಆಂತರಿಕ ಪ್ರಪಂಚಕ್ಕೆ – ಬುದ್ಧಿ, ಮನಸ್ಸು, ಅಹಂಕಾರಗಳಿಂದ ಕೂಡಿದ ಸೂಕ್ಷ್ಮ ಪ್ರಪಂಚಕ್ಕೆ ಹೆಚ್ಚು ಮಹತ್ವ ನೀಡುತ್ತದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಈ ಎರಡು ಪ್ರಪಂಚಕ್ಕೂ ಮೂಲವಾಗಿರುವ ಆತ್ಮವಸ್ತುವೇ ಪ್ರತಿಯೊಂದು ವಸ್ತುವಿನ ನೈಜಸ್ವರೂಪ; ಅದೇ ಭಗವಂತನ ನೆಲೆ, ಅದು ಇದ್ದರೆ ಮಾತ್ರ ಉಳಿದೆಲ್ಲವೂ ಇರುತ್ತವೆ ಎನ್ನುತ್ತದೆ. ಜೀವ ಹಾಗೂ ಬ್ರಹ್ಮ – ಈ ಎರಡರ ನಡುವಿನ ಸಂಬಂಧ ಎಂತಹದು ಎಂಬ ದೃಷ್ಟಿಯಲ್ಲಿ ವೇದಾಂತದ ಹಲವು ಮತಗಳಲ್ಲಿ ಭಿನ್ನತೆಯಿದೆ. ಆದರೆ ಆತ್ಮನೇ (ಅಥವಾ ಭಗವಂತನೇ) ಪರಮಸತ್ಯ, ಜೀವವು ಅವನನ್ನೇ ಅವಲಂಬಿಸಿರುತ್ತದೆ, ಕರ್ಮಗತಿಗೆ ಅನುಗುಣವಾಗಿ ಜೀವಿ ತನ್ನ ಅನುಭವಗಳನ್ನು ಹೊಂದುತ್ತಾನೆ; ಭಗವತ್ಕೃಪೆಯಿಂದ, ಜ್ಞಾನ-ಭಕ್ತಿಗಳಿಂದ ಜೀವವು ಎಲ್ಲ ಅಜ್ಞಾನವನ್ನು ಕಳೆದುಕೊಂಡು ಪರಮ ಪದವಿಯನ್ನು ಹೊಂದುತ್ತಾನೆ – ಈ ಅಂಶಗಳು ಎಲ್ಲ ಮತಗಳಲ್ಲಿ ಸಮಾನವಾಗಿರುವ ತತ್ತ್ವಗಳು.

ವೇದಾಂತದ ಒಂದು ಪ್ರಧಾನ ಮತವಾದ ಅದ್ವೈತ ಸಿದ್ಧಾಂತವು ಪ್ರಪಂಚವನ್ನು ಕುರಿತು ವಿಶಿಷ್ಟವಾದ ದೃಷ್ಟಿಕೋನವನ್ನು ಹೊಂದಿದೆ. ಅದು ಪ್ರಪಂಚವನ್ನು 'ಮಿಥ್ಯೆ'ಎಂದು ಕರೆಯುತ್ತದೆ; ಆದರೆ ಅದರರ್ಥ ಇಲ್ಲದುದು ಎಂದಲ್ಲ. ಅಶಾಶ್ವತವಾದುದು, ಕ್ಷಣಿಕವಾದುದು, ಮರುಳುಗೊಳಿಸುವುದು ಎಂದರ್ಥ. ಅದ್ವೈತ ಸಿದ್ಧಾಂತದ ಮಾಯಾವಾದವು ಬೌದ್ಧರ ಶೂನ್ಯವಾದದಂತೆ ಕಂಡುಬಂದರೂ, ಅಲ್ಲಿನ ಹಾಗೆ 'ಎಲ್ಲವೂ ಶೂನ್ಯ' ಎಂಬ ಅಭಿಪ್ರಾಯವನ್ನು ಹೊಂದಿಲ್ಲ. ಎಲ್ಲವೂ ಆತ್ಮವಸ್ತುವಿನಿಂದ ತುಂಬಿದೆ; ಆದ್ದರಿಂದ ಎಲ್ಲವೂ ಪೂರ್ಣ. ಅದನ್ನು ಕಾಣದ ಹಾಗೆ ನಮ್ಮ ದೃಷ್ಟಿಯನ್ನು, ಅರಿವನ್ನು ಅಜ್ಞಾನ ಆವರಿಸಿಕೊಂಡಿದೆ. ವ್ಯಕ್ತ ಪ್ರಪಂಚವೆಲ್ಲವೂ ಅವಿದ್ಯೆಯ, ಮಾಯೆಯ, ಅಜ್ಞಾನದ ರಚನೆ. ಆತ್ಮದರ್ಶನವಾದಾಗ ಈ ಆವರಣವು ಸರಿದು ಹೋಗುತ್ತದೆ. ಆಗ ಎಲ್ಲವೂ ಆತ್ಮವಸ್ತುವೇ ಆಗಿ ಕಾಣಿಸುತ್ತದೆ. 'ಸರ್ವವೂ ಬ್ರಹ್ಮವೇ'; 'ಆ ಬ್ರಹ್ಮ ವಸ್ತುವೇ ನಾನು'– ಮುಂತಾದ ಉಪನಿಷದ್ವಾಕ್ಯಗಳಲ್ಲಿ ಕಂಡುಬರುವ ತತ್ತ್ವವು ಅಂತಹ ಆತ್ಮಸಾಕ್ಷಾತ್ಕಾರವನ್ನು ಸೂಚಿಸುತ್ತದೆ. ಹೀಗಾಗಿ, ವೇದಾಂತವು ಪ್ರಪಂಚವನ್ನು ಅಲ್ಲಗಳೆಯದೆ, ಅದರಾಚಿನ ಉನ್ನತ ಸತ್ಯವನ್ನು ಪ್ರತಿಪಾದಿಸುತ್ತದೆ.

### ಆಧುನಿಕ ಜಗತ್ತಿನಲ್ಲಿ

ಪ್ರಪಂಚವನ್ನು ಕುರಿತ ದೃಷ್ಟಿಕೋನವು ಇಂದು ಎಲ್ಲೆಡೆ ವಿಜ್ಞಾನದ ದೃಷ್ಟಿಕೋನದಿಂದಲೇ ಅತ್ಯಂತ ಪ್ರಭಾವಿತವಾಗಿದೆ. ವೈಜ್ಞಾನಿಕ ಪ್ರಗತಿ, ತಂತ್ರಜ್ಞಾನದ ಮುನ್ನಡೆ, ದಿನನಿತ್ಯದ ಜೀವನದಲ್ಲಿ ಇವುಗಳಿಂದಾದ ಪ್ರಭಾವ – ಈ ಕಾರಣಗಳಿಂದ 'ಪ್ರಪಂಚವನ್ನು ಕುರಿತ ಭಾರತೀಯ ದೃಷ್ಟಿಕೋನ ಹೀಗೆ' ಎಂದು ಯಾರಿಗಾದರೂ ಹೇಳಿದರೆ, 'ಅದೆಲ್ಲವೂ ಕಟ್ಟುಕತೆ' ಎಂಬ ಉತ್ತರ ಎದುರಾಗುತ್ತದೆ. ಪುರಾಣ, ಕಾವ್ಯಗಳಲ್ಲಿ ಎಷ್ಟೋ ಕಟ್ಟುಕತೆಗಳಿರುತ್ತವೆ. ಆದರೆ ಯಾವುದೇ ತತ್ತ್ವ, ದರ್ಶನ ಕಟ್ಟುಕತೆಯಿಂದ ರೂಪಿತವಾಗುವುದಿಲ್ಲ. ಪ್ರತಿಯೊಂದೂ ತರ್ಕ, ಪ್ರಮಾಣ, ಅನುಭವ –

ಈ ಪರೀಕ್ಷೆಗಳ ಮೂಲಕ ಹಾದುಹೋಗಬೇಕಾಗುತ್ತದೆ. ''ಹಾಗಿದ್ದರೆ ಮಿಥ್ಯೆಯಾದ ಪ್ರಪಂಚವನ್ನು ಮೀರಿದ ಬ್ರಹ್ಮವಸ್ತು ನಿಜ ಎಂಬುದನ್ನು ಪ್ರತ್ಯಕ್ಷ ತೋರಿಸಿಕೊಡಿ, ನೋಡೋಣ. ನೇರ ಕಂಡಾಗಲೇ ನಾನು ನಂಬುತ್ತೇನೆ'' ಎಂದು ಸವಾಲು ಹಾಕುತ್ತಾರೆ, ಆಧುನಿಕ ಜನ. ಆದರೆ, ಯಾವ ವಸ್ತು ಭೌತಿಕವಲ್ಲವೋ, ಇಂದ್ರಿಯ-ಮನಸ್ಸು-ಬುದ್ಧಿಗಳನ್ನು ಮೀರಿದೆಯೋ, ಅದನ್ನು ಈ ಸಲಕರಣೆಗಳ ಮೂಲಕ ಗ್ರಹಿಸಲಾಗದು. ಹೇಗೆ ಸೂಕ್ಷ್ಮದರ್ಶಕ ಯಂತ್ರದಿಂದ ಚಂದ್ರ, ಶನಿ ಮುಂತಾದ ಗ್ರಹಗಳನ್ನು ಕಾಣಲಾಗದೋ, ಹೇಗೆ ದೂರದರ್ಶಕ (ಟೆಲಿಸ್ಕೋಪ್) ಯಂತ್ರದಿಂದ ಅಣು-ಪರಮಾಣುಗಳನ್ನು ಕಾಣಲಾಗದೋ - ಅದೇ ರೀತಿ ನಮ್ಮ ದೇಹದಲ್ಲೇ ಇರುವ ಯಂತ್ರಗಳಾದ ಇಂದ್ರಿಯ, ಮನಸ್ಸು, ಬುದ್ಧಿ ಇವು ಬೇರೆಯೇ ಆಯಾಮದ ಆತ್ಮವಸ್ತುವನ್ನು ಕಾಣಲಾರವು. ಅದಕ್ಕೆ ಬೇರೆಯೇ ಉಪಕರಣದ ಅಗತ್ಯವಿದೆ.

### ಯಾವುದು ಆ ಉಪಕರಣ?

ವೇದಾಂತ ಹೇಳುತ್ತದೆ- ಮನಸ್ಸು, ಬುದ್ಧಿ, ಇಂದ್ರಿಯಗಳು ಶುದ್ಧವಾದಾಗ, ಆಧ್ಯಾತ್ಮಿಕ ಸಾಧನೆಯ ಮೂಲಕ ಅತ್ಯಂತ ಸೂಕ್ಷ್ಮಗೊಂಡಾಗ, ಅದಕ್ಕೆ ಆತ್ಮವಸ್ತುವನ್ನು ಗ್ರಹಿಸುವ ಹೊಸ ದೃಷ್ಟಿ ಲಭಿಸುತ್ತದೆ. ಇದನ್ನೇ ಜ್ಞಾನಚಕ್ಷು ಎಂದೂ, ಮೂರನೆಯ ಕಣ್ಣು ಎಂದೂ ಸಾಂಕೇತಿಕವಾಗಿ ಹೇಳಲಾಗಿದೆ. ಯೋಗಶಾಸ್ತ್ರದಲ್ಲಿ ಇದನ್ನು 'ವಿವೇಕಖ್ಯಾತಿ' (ಪ್ರಕೃತಿ-ಪುರುಷ ಎರಡೂ ಬೇರೆ ಬೇರೆ ಎಂಬ ನಿಶ್ಚಿತವಾದ ಜ್ಞಾನ) ಎನ್ನಲಾಗಿದೆ. ಈ ಹೊಸ ದೃಷ್ಟಿಯನ್ನು ಇದ್ದಕ್ಕಿದ್ದಂತೆ ಹೊಂದಲಾಗದು; ಸಾಕಷ್ಟು ದೀರ್ಘ ಕಾಲದ ಸಾಧನೆ ಅಗತ್ಯ; ಇಡೀ ಜನ್ಮವೇ ಬೇಕಾಗಬಹುದು.

ಆಧುನಿಕ ದೃಷ್ಟಿಕೋನವು ಈ ಬಗೆಯ ಸಾಧನೆಗೆ ತಯಾರಿಲ್ಲ. ಬಾಹ್ಯ ಜಗತ್ತಿನಲ್ಲಿ ಕಂಡು ಬರುವ ಎಲ್ಲ ವಿಚಿತ್ರವನ್ನು ಗಮನಿಸಿ, ಅದರ ಅದ್ಭುತ ಬಳಕೆಗೆ ಮನಸೋತು, ಮರುಳಾಗಿ ಬಿಟ್ಟಿದೆ. ವಿವಿಧ ಮಾಧ್ಯಮಗಳು, ಯಂತ್ರ-ತಂತ್ರವೈವಿಧ್ಯಗಳು, ಕಂಪ್ಯೂಟರ್-ಮೊಬೈಲ್‌ಗಳು ಕಟ್ಟಿಕೊಡುವ ಜಗತ್ತು-ಇವೇ ಆಧುನಿಕರಿಗೆ ಪರಮಸತ್ಯವಾಗಿ ಬಿಟ್ಟಿವೆ. ವಾಸ್ತವ ಜಗತ್ತಿನ ಹಲವು ದಾರುಣ ಸತ್ಯಗಳನ್ನೇ ಸ್ಪಷ್ಟವಾಗಿ ಗುರುತಿಸಲಾಗದವರು, ಇನ್ನು ಭೌತಪ್ರಪಂಚವನ್ನು ದಾಟಿ ಹೋಗುವುದಾದರೂ ಹೇಗೆ? ಕಣ್ಣಿಗೆ ಕಂಡದ್ದು ಮಾತ್ರ ಸತ್ಯ ಎನ್ನುವವರು, ಎಲೆಕ್ಟ್ರಿಸಿಟಿ, ಇಮೇಲ್, ನೆಟ್‌ವರ್ಕ್ ಇವು ಕಣ್ಣಿಗೆ ಕಾಣದಿದ್ದರೂ ನಂಬುತ್ತಾರೆ. ಅದೇ ರೀತಿಯಲ್ಲಿ ಕಣ್ಣಿಗೆ ಕಾಣದ ಕರ್ಮನಿಯಮ, ಮನಸ್ಸು-ಬುದ್ಧಿ ಇವುಗಳ ಅದ್ಭುತ ಶಕ್ತಿ, ಎಚ್ಚರ-ಕನಸು-ನಿದ್ರೆ ಎಂಬ ಅವಸ್ಥೆಗಳು, ಜನನ-ಮರಣದ ರಹಸ್ಯ— ಇತ್ಯಾದಿ ಅಗೋಚರ ಶಕ್ತಿಗಳನ್ನು ಕುರಿತು ಏಕೆ ಚಿಂತಿಸಲಾರರು? 'ಆಧುನಿಕತೆ' ಎಂಬ ದೃಷ್ಟಿಕೋನ ನಮಗರಿವಿಲ್ಲದೆ ನಮ್ಮನ್ನು ಭೌತಪ್ರಪಂಚಕ್ಕೆ ಕಟ್ಟಿಹಾಕುತ್ತದೆ. ಅದರಿಂದ ತಪ್ಪಿಸಿಕೊಂಡಲ್ಲದೆ ನಾವು ನಮ್ಮ ಆಂತರಿಕ ಸೂಕ್ಷ್ಮ ಜಗತ್ತನ್ನು ಪ್ರವೇಶಿಸಲಾರೆವು.

### ಪ್ರಪಂಚದ ಬದಲಾವಣೆಗಳ ನಡುವೆ

'ಜಗತ್' ಎಂಬ ಪದದ ಅರ್ಥವೇ 'ಬದಲಾಗುವುದು' ಎಂದು. ಪ್ರಪಂಚದ ಕಣಕಣವೂ ಬದಲಾಯಿಸುತ್ತಿರುತ್ತದೆ. ಪ್ರತಿಯೊಂದು ವಸ್ತುವೂ ವಿನಾಶ ಹೊಂದುತ್ತದೆ. ಮಾನವನೂ ಇದಕ್ಕೆ ಹೊರತಲ್ಲ. ಹುಟ್ಟು-ಸಾವುಗಳ ನಡುವಿನ ಕ್ಷಣಿಕ ಬದುಕು ಎಷ್ಟೇ ಸುಖ, ರಂಜನೆ, ಅಚ್ಚರಿಗಳಿಂದ ಕೂಡಿದ್ದರೂ, ಯಾವುದೂ ಶಾಶ್ವತವಲ್ಲ. ಅದರೊಂದಿಗೆ ದುಃಖ, ಕಷ್ಟಕಾರ್ಪಣ್ಯಗಳಿವೆ. ಹಲವು ಬಗೆಯ ದ್ವಂದ್ವಗಳಿವೆ. ಇವುಗಳ ನಡುವೆ ಅಳಿವಿಲ್ಲದ ಸುಖ, ಶಾಂತಿ, ನೆಮ್ಮದಿಗಳನ್ನು ಅರಸುವುದು ಮಾನವನಿಗೆ ತೀರ ಸಹಜವಾದ ಪ್ರವೃತ್ತಿ. ಅನಾದಿ ಕಾಲದಿಂದಲೂ ಮಾನವನು ಶಾಶ್ವತ ಸುಖ, ಶಾಂತಿಯನ್ನು ಅರಸಿಕೊಂಡು ಹೋಗಿದ್ದಾನೆ. ಪ್ರಪಂಚದ ಎಲ್ಲೆಡೆ ಈ ಅನ್ವೇಷಣೆ ನಡೆದಿದ್ದರೂ, ಅದಕ್ಕೆ ಅಂತಿಮ ಉತ್ತರ ದೊರಕಿದ್ದು ಭಾರತದಲ್ಲೇ. **'ಅನಾದ್ಯನಂತಂ ಮಹತಃ ಪರಂ ಧ್ರುವಂ ನಿಚಾಯ್ಯ ಮೃತ್ಯುಮುಖಾತ್ ಪ್ರಮುಚ್ಯತೇ'** (ಅನಾದಿಯೂ ಅನಂತವೂ ಆದ ಬುದ್ಧಿಯೆಂಬ ಮಹತ್ ತತ್ತ್ವಕ್ಕಿಂತ ವಿಭಿನ್ನವಾದ, ಸ್ಥಿರವೂ ಶಾಶ್ವತವೂ ಆದ ಬ್ರಹ್ಮವನ್ನು ಅರಿತುಕೊಂಡು ಮೃತ್ಯುಮುಖದಿಂದ ಮುಕ್ತನಾಗುತ್ತಾನೆ - *ಕಠ, ೧.೩.೧೫*) ಎಂದು ಉಪನಿಷತ್ತಿನಲ್ಲೇ ಹೇಳಲಾಗಿದೆ. ಪ್ರಪಂಚದ ಎಲ್ಲ ಸುಖಭೋಗಗಳನ್ನು ತ್ಯಜಿಸಿ, ತಮ್ಮೆಲ್ಲ ಸೊತ್ತುಗಳನ್ನೂ ಕಡೆಗಣಿಸಿ, ಸತ್ಯವೊಂದನ್ನೇ ಅರಸಲು ಹೊರಟ ಧೀರ ವ್ಯಕ್ತಿಗಳು ಇದಕ್ಕೆ ಪರಿಹಾರವನ್ನು ಕಂಡುಕೊಂಡರು. ಭೌತ ಪ್ರಪಂಚದಲ್ಲಿ ಎಲ್ಲೂ ಶಾಶ್ವತ ಸುಖ, ಶಾಂತಿ ಸಿಗಲಾರದು; ಜೀವನದಲ್ಲಿ ಅನಿವಾರ್ಯವಾದ ಮರಣ, ರೋಗ, ದುಃಖ ಮುಂತಾದುವನ್ನೆಲ್ಲ ಮೆಟ್ಟಿ ನಿಲ್ಲಲು ಒಂದೇ ದಾರಿ - ಅದೇ ಆತ್ಮ ಸಾಕ್ಷಾತ್ಕಾರ. ಇದನ್ನು ಪಡೆದವನೇ ಅಮೃತತ್ವವನ್ನು ಪಡೆಯುತ್ತಾನೆ. ಜನನ-ಮರಣದ ಸಂಕೋಲೆಯನ್ನು ಕಡಿದು, ಶಾಶ್ವತ ಸತ್ಯದಲ್ಲಿ ಒಂದಾಗುತ್ತಾನೆ. ಆದ್ದರಿಂದ ಅನಿತ್ಯವಾದ, ದುಃಖದಿಂದ ಕೂಡಿದ ಈ ಪ್ರಪಂಚಕ್ಕೇ ಅಂಟಿಕೊಳ್ಳಬೇಡಿ; ಅದರಾಚಿನ ಸತ್ಯವನ್ನು ಕಂಡುಕೊಳ್ಳಿ. ಆಗ ಇಡೀ ಪ್ರಪಂಚವೇ ಭಗವನ್ಮಯವಾಗಿ ಕಾಣಿಸುವುದು. ಆಗಲೇ ನಿಜವಾದ ದೃಷ್ಟಿ ನಮಗೆ ಬರುವುದು; ಅಲ್ಲಿಯವರೆಗೆ ನಾವು ಕಾಣುವ ಜಗತ್ತು ತೋರಿಕೆ, ಅದನ್ನು ನಂಬಬೇಡಿ ಎನ್ನುತ್ತದೆ ವೇದಾಂತ.

'ಪ್ರತಿಯೊಬ್ಬ ವ್ಯಕ್ತಿಯೂ ಈ ಜಗತ್ತು, ಈ ವ್ಯಕ್ತಪ್ರಪಂಚ ಸತ್ಯವೇ ಎಂದು ಪ್ರಶ್ನಿಸುವ ಕಾಲ ಒಂದಲ್ಲ ಒಂದು ಬಾರಿ ಬಂದೇ ಬರುವುದು' ಎನ್ನುತ್ತಾರೆ ಸ್ವಾಮೀಜಿ. ಇದಕ್ಕೆ ಉತ್ತರವನ್ನು ನಾವು ಭಾರತದ ಆಧ್ಯಾತ್ಮಿಕ ಪರಂಪರೆಯಲ್ಲಿ ಕಂಡುಕೊಳ್ಳಬಹುದು. ✷

### ಜುಲೈ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೦೩ | ಸೋಮವಾರ | ಗುರುಪೂರ್ಣಿಮೆ |
| ೧೩ | ಗುರುವಾರ | ಏಕಾದಶಿ |
| ೧೫ | ಶನಿವಾರ | ಸ್ವಾಮಿ ರಾಮಕೃಷ್ಣಾನಂದ ಜಯಂತಿ |
| ೨೯ | ಶನಿವಾರ | ಏಕಾದಶಿ |